ಬಂಟ್ವಾಳ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ

ಸಿಸಿ ನಂ. 307/2023

ಪ್ರಾಸಾ : 05

ಚಾಸಾ : 06

| | | |
|---|---|---|
| ಹೆಸರು | : | ನಾರಾಯಣ ಗಟ್ಟಿ |
| ತಂದೆಯ ಹೆಸರು | : | ಶೀನ ಗಟ್ಟಿ |
| ಪ್ರಾಯ | : | 62 ವರ್ಷ |
| ಉದ್ಯೋಗ | : | ನಿವೃತ್ತ ಪಿಡಿಓ |
| ವಾಸಸ್ಥಳ | : | ಗೋಳ್ತಮಜಲು ಗ್ರಾಮ ಬಂಟ್ವಾಳ ತಾಲೂಕು |

ದಿಃ 26/03/2025 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು ನೆಟ್ಲ ಮುಡ್ನೂರು ಗ್ರಾಮ ಪಂಚಾಯತ್ನಲ್ಲಿ ಅಗಸ್ಟ್ 2021 ರಿಂದ ಅಗಸ್ಟ್ 2022 ರವರೆಗೆ ಪಿಡಿಓ ಆಗಿ ಕೆಲಸ ನಿರ್ವಹಿಸಿರುತ್ತೇನೆ.

2. ದಿ. 16.06.2022 ರಂದು ವಿಟ್ಲ ಠಾಣಾಧಿಕಾರಿಯವರು ಪತ್ರ ಮುಖೇನ ನೆಟ್ಲ ಮುಡ್ನೂರು ಗ್ರಾಮದ ಕೊಡಾಜೆ ಎಂಬಲ್ಲಿ ಟೋಯಿಂಗ್ ವಾಹನ ಚಾಲಕನ ನಿರ್ಲಕ್ಷತನದಿಂದ ನಿಯಂತ್ರಣ ತಪ್ಪಿ ವಾಹನವು ಡಿಕ್ಕಿ ಪಡಿಸಿದ ಹಸೈನಾರ್ ಎರಡನೇ ಅಬೂಬ್ಬಕರ್ ಗೇ ಸೇರಿದ ಅಂಗಡಿಗಳಿಗೆ ಸಂಬಂಧಿಸಿದಂತೆ ಪರವಾನಿಗೆ ಕುರಿತು ಮಾಹಿತಿ ಕೋರಿರುತ್ತಾರೆ. ದಿ. 20.06.2022 ರಂದು ಹಸೈನಾರ್ ರವರು ನಡೆಸುತ್ತಿರುವ ಅಂಗಡಿಗೆ ಪರವಾನಿಗೆ ಪಡೆದಿರುತ್ತಾರೆ ಮತ್ತು ಅಬೂಬ್ಬಕರ್ ರವರು ನಡೆಸುತ್ತಿರುವ ಅಂಗಡಿಗೆ ಪಂಚಾಯಿತಿಯಿಂದ ಪರವಾನಿಗೆ ಪಡೆದಿರುವುದಿಲ್ಲ ಎಂದು ದೃಡಪತ್ರ

ನೀಡಿರುತ್ತೇನೆ. ದಿ. 20.06.2022 ರ ದೃಡಪತ್ರವನ್ನು ನಿಪಿ-11 ಎಂದು, ಸಾಕ್ಷಿಯ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿತರ ಪರಃ ಶ್ರೀ ಸಿ ಎಂ ವಕೀಲರಿಂದಃ

3. ಯಾರು ಮತ್ತು ಯಾವ ದಿನಾಕದಂದು ಕೋರಿಕೆ ಪತ್ರವನ್ನು ಕಚೇರಿಗೆ ತಂದು ಕೊಟ್ಟಿರುತ್ತಾರೆ ಎಂದು ಈಗ ನೆನಪಿಲ್ಲ. ನಿಪಿ-11 ದೃಡಪತ್ರದಲ್ಲಿ ಕೋರಿಕೆ ಪತ್ರದ ಉಲ್ಲೇಖ ಸಂಖ್ಯೆ ನಮೂದಿಸಿರುವುದಿಲ್ಲ. ಕೋರಿಕೆ ಪತ್ರ ಬಂದ ನಾಲ್ಕು ದಿವಸಗಳ ನಂತರ ದೃಡಪತ್ರ ನೀಡಿರುತ್ತೇನೆ. ದಿ. 06.05.2022 ರಂದು ಅಂಗಡಿಗಳಿಗೆ ಭೇಟಿ ಕೊಟ್ಟಿರುತ್ತೇನೆ. ಆಗ ಹಸೈನಾರ್ ಮತ್ತು ಅಬೂಬ್ಬಕರ್ ಹಾಜರಿರಲಿಲ್ಲ. ರಾಷ್ಟ್ರೀಯ ಹೆದ್ದಾರಿಯ ಮೂರು ಮೀಟರ್ ಅಂತರದಲ್ಲಿ ಅಂಗಡಿಗಳು ಇದ್ದವು. ಹಸೈನಾರ್ ನಡೆಸುತ್ತಿರುವ ಅಂಗಡಿಯ ಕಟ್ಟಡ ನಮ್ಮ ಇಲಾಖೆಗೆ ಒಳಪಟ್ಟಿರುತ್ತದೆ. ದೃಡಪತ್ರದಲ್ಲಿ ಕದ ನಂಬ್ರ ನಮೂದಿಸಿರುವುದಿಲ್ಲ. ಸದರಿ ಕಟ್ಟಡದ ಸ್ವಾಧೀನವನ್ನು ಅಂಗಡಿ ನಡೆಸಲು ಹಸೈನಾರ್ ರವರಿಗೆ ನೀಡಲಾಗಿದೆ ಎಂದು ತೋರಿಸುವ ದಾಖಲೆಗಳನ್ನು ಮತ್ತು ತೆರಿಗೆ ಪಾವತಿ ದಾಖಲೆಯನ್ನು ದೃಡಪತ್ರದೊಂದಿಗೆ ಅಡಕ ಮಾಡಿರುವುದಿಲ್ಲ. ಅಬೂಬ್ಬಕರ್ ನಡೆಸುತ್ತಿರುವ ನಮ್ಮ ಇಲಾಖೆಗೆ ಒಳಪಟ್ಟಿರುವುದಿಲ್ಲ ಮತ್ತು ಅದು ಅನಧಿಕೃತ ಕಟ್ಟಡ ಎಂದರೆ ಸರಿ . ಘಟನೆಯ ಪೂರ್ವ ಮತ್ತು ಆನಂತರ ಅನಧಿಕೃತ ಕಟ್ಟಡ ತೆರವುಗೊಳಿಸುವಂತೆ ಅಬೂಬ್ಬಕರ್ ರವರಿಗೆ ಪಂಚಾಯಿತಿಯಿಂದ ಯಾವುದೇ ನೋಟಿಸ್ ನೀಡಿರುವುದಿಲ್ಲ. ಹಸೈನಾರ್ ರವರಿಗೆ ನೀಡಿದ 2022-2023 ನೇ ಸಾಲಿನ ಉದ್ದಿಮೇ ಪರವಾನಿಗೆಯನ್ನು ಪೋಲಿಸರಿಗೆ ನೀಡಿರುವುದಿಲ್ಲ.

4. ತಕ್ಷೀರಿನ ಕುರಿತು ತಕ್ಷೀರಿನ ದಿನವೇ ನನಗೆ ಗೊತ್ತಾಯಿತು. ಪಂಚಾಯತಿಯ ಕಟ್ಟಡಕ್ಕೆ ಹಾನಿಯಾದ ಬಗ್ಗೆ ಪೋಲಿಸರಿಗೆ ನಾನು ಯಾವುದೇ ದೂರು ನೀಡಿರುವುದಿಲ್ಲ ಮತ್ತು ಹಸೈನಾರ್ ರವರು ಪಂಚಾಯತಿಗೆ ಯಾವುದೇ ದೂರು

ನೀಡಿರುವುದಿಲ್ಲ. ನಾನು ಸ್ಥಳಕ್ಕೆ ಭೇಟಿ ಕೊಟ್ಟಿರುವುದಿಲ್ಲ, ನಾನು ಪೋಲಿಸರ ಕೋರಿಕೆಯ ಮೇರೆಗೆ ಹಸೈನಾರ್ ಮತ್ತು ಅಬೂಬ್ಬಕರ್ ರವರಿಗೆ ಸಹಾಯ ಮಾಡಲು ನಿಪಿ-11 ದೃಡಪತ್ರವನ್ನು ಸುಳ್ಳಾಗಿ ನೀಡಿದ್ದೇನೆ ಎಂದರೆ ಸರಿಯಲ್ಲ. ಹಸೈನಾರ್ ರವರಿಗೆ ಪಂಚಾಯತ್ ಕಟ್ಟಡವನ್ನು ಸ್ವಾಧೀನಕ್ಕೆ ಕೊಟ್ಟಿರುವುದಿಲ್ಲ ಮತ್ತು ತಕ್ಷೀರು ಸ್ಥಳದಲ್ಲಿ ಪಂಚಾಯತ್ ಗೆ ಸೇರಿದ ಯಾವುದೇ ಕಟ್ಟಡ ಇರುವುದಿಲ್ಲ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಚಾರಗಳು ಸತ್ಯಕ್ಕೆ ದೂರವಾದವು ಎಂದರೆ ಸರಿಯಲ್ಲ.

ಮರುವಿಚಾರಣೆ: ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಲಾಗಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,
ಬಂಟ್ವಾಳ